ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:–

ಸಂಭಾಜಿ ಪಾಟೀಲರ ಬಂಧನ.

6.05 ಪಿ.ಎಂ.

†ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷಿಣಿಯವರೇ, ಬೆಳಿಗ್ಗೆ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೇರೆ ಕಾರ್ಯದ ಮೇಲೆ ಹೋಗಿದ್ದರು. ಬೆಳಗಾವಿಯ ಮೇಯರ್ ಆಗಿ ಆಯ್ಕೆಯಾದ ಶ್ರೀ ಸಂಬಾಜಿ ಪಾಟೀಲರ ಬಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಅವರು ಮೇಯರ್ ಆಗಿ ಆಯ್ಕೆಯಾಗಿದ್ದಾರೆ. ಅವರು ಟಾಡದಲ್ಲಿ ಜೈಲ್‌ನಲ್ಲಿ ಇದ್ದರೂ ಕೂಡ ಹೈಕೋರ್ಟಿನ ಆದೇಶದ ಪ್ರಕಾರ ಚುನಾವಣೆಯಲ್ಲಿ ಭಾಗವಹಿಸಿ ಆಯ್ಕೆಯಾಗಿದ್ದಾರೆ. ಈಗ ಅವರು ಜೈಲ್‌ನಲ್ಲಿ ಇದ್ದಾರೆ. ಹಾಗಾದರೆ ಅವರನ್ನು ಬಿಡುಗಡೆ ಮಾಡುವ ಬಗ್ಗೆ ರಾಜ್ಯ ಸರಕಾರದ ನಿರ್ಧಾರ ಏನು ? ಇವತ್ತು ಬೆಳಿಗ್ಗೆ ಬೆಳಗಾವಿಯ ಕನ್ನಡ ಮತ್ತು ಉರ್ದು ಮಾತನಾಡುವ ಕಾರ್ಪೋರೇಟರ್‌ಗಳು ಇಲ್ಲಿಗೆ ಬಂದಿದ್ದಾರೆ. ಸಂಜೆ ಅವರುಗಳು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಅವರಿಗೆ ಮನವಿ ಸಲ್ಲಿಸಬೇಕೆಂದು ಇದ್ದಾರೆ. ನನಗೆ ಆ ನಿಯೋಗದ ವಕ್ತಾರರು ಅಲ್ಲಿನ ವಿಷಯವನ್ನು ಹೇಳಿದ್ದಾರೆ. ಅಲ್ಲಿ ಅನ್ಯಾಯವಾಗಿದೆ. ಅಲ್ಲಿ ಎಂಇಎಸ್ ನವರ ಒಂದು ಪ್ರತಿಭಟನೆ ತೀವ್ರ ಇದೆ. ಶ್ರೀ ಸಂಬಾಜಿ ಪಾಟೀಲರು ಕನ್ನಡದ ಪರವಾಗಿ ಇರತಕ್ಕಂಥವರು. ಕನ್ನಡದ ಬಗ್ಗೆ ಆಸ್ಥೆಯನ್ನು ವಹಿಸಿರತಕ್ಕಂಥವರು. ಈಗ ಅವರು ಮೇಯರ್ ಆಗಿ ಚುನಾಯಿತರಾಗಿದ್ದಾರೆ. ನಮ್ಮ ಕನ್ನಡದ ಕಾರ್ಪೋರೇಟರ್‌ಗಳು ಅವರಿಗೆ ಬೆಂಬಲವನ್ನು ಕೊಟ್ಟಿದ್ದಾರೆ. ಹೀಗಿರುವಾಗ ಅವರು ಜೈಲ್‌ನಲ್ಲಿರತಕ್ಕಂಥಾದ್ದು ಸರಿಯೇ ಎಂಬ ವಾದ ಇದೆ. ಅವರ ಮೇಲೆ ಅನೇಕ ಮೊಕದ್ದಮೆಗಳು ಇತ್ಯಾದಿ ಏನಾದರೂ ಇರಬಹುದು. ಅದು ನನಗೆ ಗೊತ್ತಿಲ್ಲ. ಆದರೆ ಮೇಯರ್ ಆಗಿ ಚುನಾಯಿತರಾದ ಮೇಲೆ ಅವರನ್ನು ಜೈಲ್‌ನಲ್ಲಿ ಇಟ್ಟಿರುವುದು ಎಷ್ಟರಮಟ್ಟಿಗೆ ಸಾಧುವಾದುದು ಎಂಬ ವಿಚಾರದಲ್ಲಿ ಸರಕಾರದವರು ಹೇಳಬೇಕು. ಹೆಚ್ಚಿನ ಮಾಹಿತಿಗಳು ಸರಕಾರದವರ ಹತ್ತಿರ ಇರುತ್ತವೆ. ಅವರು ಈಗ ಬಳ್ಳಾರಿ ಜೈಲ್‌ನಲ್ಲಿದ್ದಾರೆ ಎಂಬ ಒಂದು ವರ್ತಮಾನ ಇದೆ. ಹಾಗಾದರೆ ಸರಕಾರದವರು ಒಬ್ಬ ಚುನಾಯಿತ ಮೇಯರ್‌ನ್ನು ಜೈಲ್‌ನಲ್ಲಿ ಇಟ್ಟರೆ ಬೆಳಗಾವಿಯ ಮಹಾನಗರ ಪಾಲಿಕೆಯ ಪರಿಸ್ಥಿತಿ ಏನಾಗಬೇಕು ? ಅವರ ಸ್ಥಾನಮಾನ ಏನು ? ಅವರನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರದವರ ನಿರ್ಧಾರ ಏನು ? ಈ ಬಗ್ಗೆ ತೀರ್ಮಾನವಾಗಬೇಕಾಗಿದೆ. ಬೆಳಗಾವಿಯಲ್ಲಿ ಎಂ.ಇ.ಎಸ್.ನವರ ಮೊಂಡುತನದಿಂದಾಗಿ ಮೊದಲಿನಿಂದಲೂ ಅಲ್ಲಿ ಒಂದು ತರಹದ ಕಲುಷಿತ ವಾತಾವರಣ ಇದೆ. ಸಂಬಾಜಿ ಪಾಟೀಲರು ಮತ್ತು ಇತರ ಕೆಲವು ಕನ್ನಡಪರ ಕಾರ್ಪೋರೇಟರ್‌ಗಳು ಬೆಂಬಲ ಕೊಟ್ಟ ಕಾರಣ ಕಳೆದ ಸಾರಿ ಅಲ್ಲಿ ಕನ್ನಡದ ಮೇಯರ್ ಆಯ್ಕೆ ಆದ ಹಾಗೆ ಆಯಿತು. ಪಾಟೀಲರ ಹಿನ್ನೆಲೆಯ ಬಗ್ಗೆ ನಾನು ಈಗ ಅಲ್ಲಿಯ ನಿಯೋಗದವರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಲಿದ್ದಾರೆ. ಇಲ್ಲಿ ಸರಕಾರದ ನಿರ್ಣಯವನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಚುನಾಯಿತ ಮೇಯರ್‌ರವರನ್ನು ಯಾವ ರೀತಿಯಲ್ಲಿ ಬಿಡುಗಡೆ ಮಾಡುತ್ತೀರಿ, ಆ ಬಗ್ಗೆ ಏನು ನಿರ್ಧಾರ ಮಾಡಿದ್ದೀರಿ ಎಂಬ ಬಗ್ಗೆ ತಿಳಿಸಬೇಕು. ನಾನು ಈ ವಿಚಾರವನ್ನು ಕೇವಲ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಬಿಟ್ಟು ಅವರ ವ್ಯಕ್ತಿಗತ ಹಿನ್ನೆಲೆಯ ಬಗ್ಗೆ ನನ್ನಲ್ಲಿ ಮಾಹಿತಿಗಳು ಇಲ್ಲ. ಶಿವರಾಮೇಗೌಡರನ್ನು ಮರೆತಿರುವವರು ನೀವು, ನನ್ನ ಮರೆತು ಬಿಟ್ಟಿರಿ ಎಂದು, ಎಲ್ಲರೂ ಗಂಭೀರವಾಗಿ ಕುಳಿತುಬಿಟ್ಟರು. ಶಿವರಾಮೇಗೌಡರ ಹಿಂದೆ ಮುಂದೆ ಓಡಾಡಿಕೊಂಡಿದ್ದ ಇವರು ಎಲ್ಲಾ ಮರೆತುಬಿಟ್ಟಿದ್ದಾರೆ. ಶಿವರಾಮೇಗೌಡರನ್ನು ಹಗಲು ರಾತ್ರಿ ಹೊಗಳಿಕೊಂಡು ಮೇಲೆ ಚವ್ವರ ಬೀಸುತ್ತಿದ್ದ ನೀವೆಲ್ಲ 25–30 ಜನ ಒಬ್ಬರಾದರೂ ಇದ್ದೀರಾ ನೀವು, ಎಲ್ಲಿ ಪತ್ತೇ ಇಲ್ಲ, ಬರೀ

ಮಾತಾಡ್ತೀರಿ, ನೀವು ನನ್ನನ್ನು ಸಿಂಧ್ಯಾರನ್ನು ಆ ವಿಷಯದಲ್ಲಿ ಕೇಳಬೇಡಿ, ಸ್ವಲ್ಪ ಪ್ರಾಮಾಣಿಕವಾಗಿ ನಾವಿದ್ದೇವೆ, ಅದರ ಮಾತಾಡುವುದರಲ್ಲಿ. ಒಂದು ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ನೇರವಾಗಿ ಅವರಿಗೆ ಅವಕಾಶ ಕೊಟ್ಟಿದ್ದಾರೆ. ನಮ್ಮ ಹೈಕೋರ್ಟ್ ಸಹ ಚುನಾವಣೆಯಲ್ಲಿ ಭಾಗವಹಿಸಲು ಅವರಿಗೆ ತೀರ್ಪು ಕೊಟ್ಟಿದೆ. ಈಗ ಚುನಾವಣೆಯಲ್ಲಿ ಅವರು ಗೆದ್ದಿದ್ದಾರೆ. ಆದ್ದರಿಂದ ಸರ್ಕಾರ ಅವರ ಬಂಧನ ಯಾವ ರೀತಿ ಆಯಿತು ಎಂದು ತಿಳಿಸಬೇಕು. ಅಲ್ಲಿ ಗುಲ್ಲೇನು ಇದೆ ಅಂದರೆ ಮಹಾರಾಷ್ಟ್ರ ವಿಕೀಕರಣ ಸಮಿತಿಯನ್ನು ಒಡೆದಿದ್ದಾನೆ, ಎಂಇಎಸ್ ಕೇಂದ್ರದಲ್ಲಿ ಸಚಿವರಾಗಿರುವವರಿಗೆ ಕೆಲವರಿಗೆ ಬೆಂಬಲವಾಗಿರುವಂಥದು, ಆ ಎಂಇಎಸ್ ನ ಅಸ್ತಿತ್ವ ಹೋಗುತ್ತಲ್ಲ ಎಂದು ಈ ಪಾಟೀಲರನ್ನು ಬಂಧನದಲ್ಲಿಟ್ಟಿದ್ದಾರೆ ಅಂತ ವಾಗ್ವಿವಾದ ನಡೆಯುತ್ತಿದೆ. ನಾನು ಸಂಪೂರ್ಣವಾಗಿ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಮಾತಾಡುತ್ತಿದ್ದೇನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಏನು ಮಾಡುತ್ತೀರಿ, ಮತ್ತು ಪ್ರಮುಖವಾಗಿ ಒಂದು ಗಡಿಭಾಗದಲ್ಲಿರುವ ಮಹಾನಗರಪಾಲಿಕೆ ಪರಿಸ್ಥಿತಿ ಬಗ್ಗೆ ತಾವು ಬೆಳಕು ಚೆಲ್ಲಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ವಾಟಾಳ್ ನಾಗರಾಜರು ಹೇಳಿದ್ದಾರೆ, ನಾನು ಒಂದು ಮಾತು ಒಪ್ಪಿಕೊಳ್ಳುತ್ತೇನೆ, ಎಲೆಕ್ಟೆಡ್ ಜನ ಬಿಹೈಂಡ್ ದಿ ಬಾರ್ಸ್ ಇರಬೇಕೆಂದು ನಾನು ಹೇಳೋದಿಲ್ಲ. ಡೆಮಾಕ್ರಸಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರಬೇಕಾಗುತ್ತದೆ. ಆದರೆ ವಾಟಾಳ್ ನಾಗರಾಜರು ಒಂದು ಮಾತು ಹೇಳಿದರು ಕನ್ನಡದ ಜನ ಅಂತ, ಅದನ್ನು ನಾನು ಒಪ್ಪಿಕೊಳ್ಳೋದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಕನ್ನಡದವರು ಎಂದು ಹೇಳಲಿಲ್ಲ, ಕನ್ನಡದಲ್ಲಿ ಸ್ವಚ್ಛವಾಗಿ ಮಾತಾಡುತ್ತಾರೆ ಮತ್ತು ಕನ್ನಡದವರು ಮೇಯರಾಗುವುದಕ್ಕೆ ಅವರು ಸಂಪೂರ್ಣ ಬೆಂಬಲ ಕೊಟ್ಟಿದ್ದಾರೆ. ಮತ್ತು ಕರ್ನಾಟಕದಲ್ಲಿ ಮರಾಠಿಗರು ಇರಲೇಬಾರದೂಂತ ನಾವೆಂದೂ ಹೇಳೋದಿಲ್ಲ. ರಾಜಕೀಯವಾಗಿ ನಮಗೂ ಅವರಿಗೂ ದ್ವಂದ್ವ ಇದೆ, ವಿರೋಧಗಳಿವೆ, ಆದರೆ ಆ ಪ್ರಶ್ನೆ ಬೇಡ, ಎಂಇಎಸ್.ನವರು ನಾಳೆ ಬೆಳಿಗ್ಗೆ ಹೇಳಲಿ, ಬೆಳಗಾವಿ ಬಗ್ಗೆ ನಮ್ಮದು ತಕರಾರಿಲ್ಲ, ಬೆಳಗಾವಿ ಸಂಪೂರ್ಣ ಕರ್ನಾಟಕದ್ದೇ ಅಂತ ಹೇಳಲಿ, ಸಂತೋಷವಾಗಿ ಅವರು ಇರಲಿ, ನಮ್ಮದೇನೂ ಆಭ್ಯಂತರವಿಲ್ಲ, ಅವರು ಕನ್ನಡದವರಲ್ಲ ಅಂತ ಹೇಳಲಿಲ್ಲ, ಅವರು ಕನ್ನಡವನ್ನು ಚೆನ್ನಾಗಿ ಮಾತಾಡುತ್ತಾರೆ ಅವರು ಮರಾಠಿಯವರು ನಿಜ, ಆದರೆ ಅವರ ಬೆಂಬಲದಿಂದ ಕನ್ನಡದವರು ಮೇಯರ್ ಆಗಿದ್ದು ನಿಜ, ಮತ್ತು ಇವತ್ತು ಅವರ ಬಗ್ಗೆ ಸರ್ಕಾರಕ್ಕೆ ಮನವಿ ಕೊಡಲು ಬಂದಿರುವವರು ಯಾರು ? ಕನ್ನಡದ ಸದಸ್ಯರು ಉರ್ದು ಸದಸ್ಯರು ಎಲ್ಲಾ ಬಂದಿದ್ದಾರೆ, ಆದ್ದರಿಂದ ಯಾರನ್ನು ಕೇಳಿದರು ಅವರು ? ನನ್ನನ್ನು ಕೇಳಿದರು. ಈ ಸದನ ನಡೆಯುವಾಗ ನನ್ನ ಕರ್ತವ್ಯ ನಾನು ಮಾಡಬೇಕಾಗಿದೆ. ಒಬ್ಬ ಪ್ರಜಾಪ್ರತಿನಿಧಿ ಚುನಾವಣೆಯಲ್ಲಿ ಬಂದಾಗ ನಾವು ನೋಡಬೇಕಾಗುತ್ತದೆ ಇಲ್ಲದಿದ್ದರೆ ನಮ್ಮದು ಕರ್ತವ್ಯಲೋಪವಾಗುತ್ತದೆ. ನೀವು ಆ ಸಂಬಾಜಿ ಬಗ್ಗೆ ಏನು ಬೇಕಾದರೂ ಕಥೆ ಕಟ್ಟಿ ಹೇಳಬಹುದು, ಸರ್ಕಾರದಲ್ಲಿ ಏನೇನು ಮಾಹಿತಿ ಇದೆ ಅವರು ಹೇಳಿಕೊಳ್ಳಲಿ, ನನಗೂ ಅದಕ್ಕೂ ಸಂಬಂಧವಿಲ್ಲ, ನಾನು ಎಲ್ಲಿಗೆ ನಿಲ್ಲುತ್ತೇನೆ ಅಂದರೆ .....

ಶ್ರೀ ಆರ್. ವಿ. ದೇಶಪಾಂಡೆ:– ಹಾಗಾಗಿ ನಾನು ಏನು ಹೇಳುತ್ತಿದ್ದೇನೆ, ಅವರ ಕಡೆಯಿಂದ ಒಂದು ಒಳ್ಳೆಯ ಕೆಲಸವಾಗಿದೆ ಸಮಾಜಕ್ಕೆ ಏನೆಂದರೆ ಎಂಇಎಸ್ ಒಡೆದಿದ್ದಾರೆ. ಅದರ ಬಗ್ಗೆ ಯಾವುದೂ ಸಂದೇಹವಿಲ್ಲ ನಾವು ಒಪ್ಪಿಕೊಳ್ಳಬೇಕಾಗಿದೆ. ಅವರು ಇಲೆಕ್ಟೆಡ್ ಮೇಯರ್. ಆದರೆ ಲಾ ಆಂಡ್ ಆರ್ಡರ್ ಬಗ್ಗೆ ನಮಗಿಂತ ಸರ್ಕಾರಕ್ಕೆ ಒಳ್ಳೆಯ ಪ್ರಜ್ಞೆ ಇರುತ್ತದೆ. ಶ್ರೀ ವಾಟಾಳ್ ನಾಗರಾಜ್ ಹೇಳಿದ ಹಾಗೆ ಅವ ಇಲೆಕ್ಟ್ ಆಗಿ ಬರ್ತಾನೆ, ಅವ ಎಂಇಎಸ್ ಒಡಯಲಿಕ್ಕೆ ಪ್ರಯತ್ನ ಮಾಡ್ತಾನೆ ಅಂತ ಅವನನ್ನು ಅರೆಸ್ಟ್ ಮಾಡಿದ್ದರೆ ಅದು ತಪ್ಪು. ಆದರೆ ಸರ್ಕಾರ, ಅವನನ್ನು ಏತಕ್ಕೆ

ಅರೆಸ್ಟ್ ಮಾಡಿದರು ? ಅದಕ್ಕೆ ಕಾರಣಗಳೇನು ? ಅದು ನಿಮಗೆ ನಮಗಿಂತ ಹೆಚ್ಚಿಗೆ ಗೊತ್ತು. ಹಾಗೆಯೇ ಅದರ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ, ಎಲೆಕ್ಟೆಡ್ ಜನ ಅವರು behind the bars ಯಾವಾಗಲೂ ಇರಬಾರದು. ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಫಂಕ್ಷನಿಂಗ್ ಇರಬೇಕು. ಆದರೆ ಲಾ ಅಂಡ್ ಆರ್ಡರ್ ವಿಚಾರದಲ್ಲಿ, ಮುಖ್ಯಮಂತ್ರಿಯವರು ನಮಗಿಂತ ಅವರಿಗೆ ಚೆನ್ನಾಗಿ ಗೊತ್ತು. ಅವನನ್ನು ಏತಕ್ಕೆ ಅರೆಸ್ಟ್ ಮಾಡಿದ್ದಾರೆ, ವಾಟಾಳ್ ನಾಗರಾಜ್ ಹೇಳಿದ ಕಾರಣದಿಂದ ಮಾಡಿದ್ದರೆ ಇಮ್ಮಡಿಯೇಟ್‌ಲಿ ಅವನ ಬಿಡುಗಡೆಯಾಗಬೇಕು. ಅಥವಾ ಬೇರೆ ಕಾರಣದಿಂದ ಆಗಿದ್ದಲ್ಲಿ ಅದರ ನಿರ್ಣಯವನ್ನು ಸರ್ಕಾರ ಮಾಡಬೇಕಾಗುತ್ತದೆ ವಿನಃ ನಮಗೆ ಇದರ ಬಗ್ಗೆ ಈ ಸಮಯದಲ್ಲಿ ಹೇಳುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ಮುಖ್ಯಮಂತ್ರಿಗಳು ಇದರ ಬಗ್ಗೆ ತಾವೇ ಅದರ ಬಗ್ಗೆ ಸೂಕ್ತವಾದ ನಿರ್ಣಯ ತೆಗೆದುಕೊಳ್ಳಬಹುದು ಎಂದು ನನ್ನ ಅನಿಸಿಕೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು, ವಿರೋಧ ಪಕ್ಷದ ಸನ್ಮಾನ್ಯ ನಾಯಕರಾದಂಥ ಮಾನ್ಯ ದೇಶಪಾಂಡೆಯವರು, ಬೆಳಗಾಂನಲ್ಲಿ ಸಾಂಬಾಜಿ ರಾವ್ ಪಾಟೀಲ್ ಮತ್ತು ಇತರೆ ನಾಲ್ಕು ಜನ ಅವರನ್ನು ಬಂಧನದಲ್ಲಿ ಇಟ್ಟ ವಿಚಾರದಲ್ಲಿ ಈ ಪ್ರಸ್ತಾವವನ್ನು ಮಾಡಿದ್ದಾರೆ. ಈಗ ಈ ಬಂಧನ ಕಲಂ ಸೆಕ್ಷನ್ 8, Karnataka Prevention of Dangerous Activities, Bootleggers, Drug offenders, Gamblers, Goondas, Immoral Traffic Act. ಈ ಒಂದು ಕಾನೂನಿನ ಒಂದು ಇದರಲ್ಲಿ ಮಾಡಿದ್ದಾರೆ. 23 ನೇ ತಾರೀಖಿಗೆ. ಮೇಯರ್‌ಗೆ ಚುನಾವಣೆಯಾದ್ದದು 26ನೇ ತಾರೀಖು. ಇದರಲ್ಲಿ ಈ ಒಂದು ಬಂಧನ ಯಾವುದೇ ರಾಜಕೀಯ ಕಾರಣದಿಂದ ಆಗಿಲ್ಲ. ಅವರು ಎಂ.ಇ.ಎಸ್.ಗೆ ಸೇರಿದ್ದರು, ಅಥವಾ ಎಂ.ಇ.ಎಸ್.ಗೆ ವಿರುದ್ಧ ಹೋದರು, ಅವರ ಸಂಘರ್ಷಣೆಗೂ ಈ ಬಂಧನಕ್ಕೂ ಏನೂ ಸಂಬಂಧವಿಲ್ಲ. ತಮಗೆ ಹೇಳುವುದಿದ್ದರೆ ಅದು ಜಿಲ್ಲಾ ಪೋಲೀಸ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಅವರು ಅದು ಅವರ ಕಾನೂನಿನ ಒಂದು ಏನು ಕಕ್ಷೆ ಇದೆ, ಅದನ್ನು ಹೊಂದಿಕೊಂಡು ಅವರು ಮಾಡಿದ್ದಾರೆ. ಅದು ನಮ್ಮ ಹಸ್ತಕ್ಷೇಪ ಈ ಮಟ್ಟದಲ್ಲಿ ರಾಜಕೀಯ ಮಟ್ಟದಲ್ಲಾಗಲೀ, ಮಂತ್ರಿಗಳ ಮಟ್ಟದಲ್ಲಾಗಲಿ ಅದು ಏನೂ ಇರುವುದಿಲ್ಲ. ಮುಖ್ಯವಾಗಿ ಎರಡು ಕಾರಣ ಇದೆ ಅದಕ್ಕೆ. ಒಂದು relating to Mutca gambling ಮಟ್ಕಾ ಗ್ಯಾಂಬ್ಲಿಂಗ್ ವಿಪರೀತವಾಗಿ ಆಗುತ್ತಿದೆ. ಆ ಕಾರಣದಿಂದ ಮತ್ತು ಈ ಚಟುವಟಿಕೆಯಿಂದಾಗಿ ಒಂದು ಸಾರ್ವಜನಿಕ ಶಾಂತಿಭಂಗ ಮತ್ತು ಬೇರೆ ಇನ್ನಿತರ ತೊಂದರೆಗಳು ಆಗುತ್ತದೆ ಎಂಬ ಕ್ಷೋಭೆ ಆಗುತ್ತದೆ ಎಂಬ ಒಂದು ಈ ಎರಡು ಕಾರಣಗಳನ್ನು ಕೊಟ್ಟು ಅವರು ಬಂಧನದಲ್ಲಿಟ್ಟಿದ್ದಾರೆ. ಆದ್ದರಿಂದ ತಾವು ಈ ಕಾರಣದಿಂದ ನಾವು ರಾಜಕೀಯ ಕಾರಣ ಇದ್ದರೆ ಈಗಲೇ ನಾನು ಅನೌನ್ಸ್ ಮಾಡಿ ಬಿಡುತ್ತೇನೆ, ಬಿಡುಗಡೆ ಮಾಡುತ್ತೇನೆ ಎಂದು ಹೇಳಿ. ರಾಜಕೀಯ ಕಾರಣ ಏನೂ ಇಲ್ಲ. ಎಕ್ಸ್‌ಟ್ರೀನಿಯಸ್ ಬೇರೆ ಹೊರತಾದಂಥ ಬೇರೆ ಯಾವ ಕಾರಣನೂ ಕೂಡ ಇಲ್ಲ. ಕಾನೂನಿನ ದೃಷ್ಟಿಯಿಂದ ಮತ್ತೆ ಬೆಳಗಾಂ ನಗರಕ್ಕೆ ಸಂಬಂಧ ಪಟ್ಟಂಥ ಒಂದು ಶಾಂತಿ ವ್ಯವಸ್ಥೆಯ ಮಿತಿಯಿಂದ ಮತ್ತೆ ಆ ಶಾಂತಿ ವ್ಯವಸ್ಥೆಗೆ ಯಾವುದೇ ರೀತಿಯಾದಂಥ ಇಂಥ ಚಟುವಟಿಕೆಗಳು ಭಗ್ನ ತರಬಾರದು ಎಂಬ ಒಂದು ಕಾರಣದಿಂದ ಕಾನೂನು ಪ್ರಕಾರ, ಕಾನೂನು ರೀತ್ಯ ಅವರು ಬಂಧನ ಕೈಗೊಂಡಿದ್ದಾರೆ. ಆದ್ದರಿಂದ ಈ ಕಾನೂನು ಪ್ರಕಾರ 12 ದಿವಸದಲ್ಲಿ ಇದು ದೃಢೀಕರಣ ಆಗಬೇಕು. ಈ ದೃಢೀಕರಣ ಸರ್ಕಾರಕ್ಕೆ ಬರುತ್ತದೆ. ದೃಢೀಕರಣ ಮಾಡುವಾಗ ನಾವು ಎಲ್ಲಾ .....

ಒಬ್ಬ ಮಾನ್ಯ ಸದಸ್ಯರು:– ದೃಢೀಕರಣಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ:– ದೃಢೀಕರಣ ಇನ್ನೂ ಮಾಡಿಲ್ಲ. ಆದರೆ ಕಾನೂನು ಪ್ರಕಾರ ಮತ್ತು ಕಾನೂನು ಪ್ರಕಾರವೇ ನಡೆಯುತ್ತದೆ. ಯಾವುದೇ ಒಂದು ರಾಜಕೀಯ, ಒಂದು ಉತ್ತೇಜನದಿಂದ ಅಥವಾ ರಾಜಕೀಯ ಕಾರಣದಿಂದ ಬಂಧನದಿಂದ ಬಿಡುವುದು ಅಥವಾ ಬಂಧನಕ್ಕೆ ಮತ್ತು ಒಳಪಡಿಸಿ ಅಂಗೀಕಾರ ಮಾಡುವುದು ಎರಡನ್ನೂ ನಾವು ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಮಾಡಿದರೆ ಬಿಟ್ಟರೂ ಆ ಕಾರಣದಿಂದ ನಾವು ಬಿಟ್ಟರೂ ಅಧಿಕಾರ ದುರುಪಯೋಗ ಮಾಡಿದ ಹಾಗೆ ಆಗುತ್ತದೆ.

ಆ ರಾಜಕೀಯ ಕಾರಣದಿಂದ ನಾವು ಬಂಧನವನ್ನು ಸ್ಥಿರೀಕರಣ ಮಾಡಿದರೂ ಕೂಡ ಕಾನೂನನ್ನು ದುರುಪಯೋಗ ಮಾಡಿದಂತೆ ಆಗುತ್ತದೆ. ಈ ಎರಡು ರೀತಿಯ ಕಾನೂನು ರೀತ್ಯಾ ಮಾಡಲಿಕ್ಕೆ ಆಗುವುದಿಲ್ಲ. ಅಂಗೀಕೃತ ಮಾಡುವಾಗ ತಾವು ಏನು ಹೇಳಿದ್ದೀರಿ, ಅದನ್ನು ಸರ್ಕಾರ ವಿಚಾರ ಮಾಡುತ್ತದೆ. ಗಂಭೀರವಾದ ವಿಚಾರಗಳನ್ನು ಪರಿಗಣನೆ ಮಾಡಿ ಆ ಕಾನೂನು ರೀತ್ಯಾ ಅಂಗೀಕರಿಸಬೇಕಾದರೆ ಅಂಗೀಕರಿಸುತ್ತೇವೆ. ಕಾನೂನು ರೀತ್ಯಾ ಬಂಧನವನ್ನು ಸ್ಥಿರೀಕರಣಗೊಳಿಸುವ ಅಗತ್ಯ ಇಲ್ಲವೆಂದು ಹೇಳಿದರೆ ಅಗತ್ಯ ಇಲ್ಲ ಎಂದು ಮಾಡುತ್ತೇವೆ. ಆದ್ದರಿಂದ ಇಷ್ಟು ವಿಚಾರಗಳನ್ನು ನಾವು ಹೇಳಬಹುದು. ಇದು ಮರಾಠಿಗಳಿಗೆ ವಿರುದ್ಧ ಹೋದರು, ಕನ್ನಡದ ಪರವಾಗಿ ಇದ್ದರು ಈ ವಿಚಾರ ಬೇರೆ ನೋಡೋಣ. ನಾವು ಕನ್ನಡದ ವಿಚಾರ ಮಾತನಾಡುವಾಗ ಆ ದೃಷ್ಟಿಕೋನದಲ್ಲಿ ನೋಡೋಣ. ಕಾನೂನು ಮುರಿದು ಅಥವಾ ಕಾನೂನು, ಶಾಂತಿಗೆ ಭಂಗಕ್ಕೆ ಯಾರು ಬಂದರೂ ಕೂಡ ಯಾರು ಇದ್ದರೂ ಕೂಡ ಅದನ್ನು ಬಹಳ ಗಟ್ಟಿಯಾಗಿ ನಾವು ಹಿಡಿಯಬೇಕಾಗುತ್ತದೆ. ಆ ಕಾನೂನು ಗ್ರಿಪ್ ಏನು ಇದೆ, ಹತೋಟಿ ಏನು ಎಕ್ಸ್‌ಟ್ರೀನಿಯನ್, ಬೇರೆ ಕಾರಣವೆಂದು ಇದನ್ನು ಸಡಿಲಗೊಳಿಸುವುದಕ್ಕೆ ಆಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್:– ತಾವು ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಅದನ್ನು ನಂಬುತ್ತೇನೆ. ಕಾನೂನಿನಿಂದ ಅವರು ಏನು ಮಾಡಿದ್ದರೂ ಬಿಡುಗಡೆ ಮಾಡಿ ಎಂದು ಹೇಳತಕ್ಕ ವಾದ ನಮ್ಮದಲ್ಲ. ಈ ಮುಂಚೆ ಅವರ ಮೇಲೆ ಅನೇಕ ಮೊಕದ್ದಮೆಗಳು ಏನಾದರೂ ಇದ್ದವೋ ಅಥವಾ ಹಿಂದೆ ಅನೇಕ ಸಾರಿ ಅವರನ್ನು ಬಂಧಿಸಿದ್ದಿರೋ ಎಂದು ಹೇಳಬೇಕು. ಈ ವಾರದಲ್ಲಿ ಅಂದರೆ ಚುನಾವಣೆ ಸಂದರ್ಭದಲ್ಲಿ ಬಂಧಿಸಿದ್ದೀರಲ್ಲ, ಇದಕ್ಕೆ ಹಿಂದೆ ಮಟ್ಕಾ ಮಾಡಬೇಕಾದರೆ, ದೊಂಬಿ ಮಾಡಬೇಕಾದರೆ, ಲೂಟಿ ಮಾಡಬೇಕಾದರೆ ಬಂಧಿಸಿದ್ದಿರೋ, ಸಡನ್ ಆಗಿ ಒಂದೇ ದಿವಸ ಬರುವುದಕ್ಕೆ ಆಗುವುದಿಲ್ಲ. ಯಾರಾದರೂ ಒಂದೇ ದಿನ ಇದ್ದಕ್ಕಿದ್ದ ಹಾಗೆ ವೇಷ ಹಾಕಿಕೊಂಡು ಬರುವುದಕ್ಕೆ ಆಗುವುದಿಲ್ಲ. ಆತನ ಮೇಲೆ ಹಿಂದೆ ಏನಾದರೂ ಕ್ರಮಗಳು ಇದ್ದವೋ ನೋಡಬೇಕು. ನನಗೆ ನಿಯೋಗದವರು ಏನು ಹೇಳುತ್ತಿದ್ದರು ಎಂದರೆ ಅದು ಉದ್ದೇಶಪೂರ್ವಕವಾಗಿ ರಾಜಕೀಯವಾಗಿ ಮಾಡಿದ್ದಾರೆ ಎಂದು. ಅವರು ಬಂದು ಹೇಳಿದರು, ತಮಗೆ ಒಂದಿಷ್ಟು ಸಂಗತಿಗಳು ಇವೆ. ನನಗೆ ಏನೂ ಇಲ್ಲ. ನನಗೆ ಏನಿದ್ದರೂ ಆ ನಿಯೋಗದವರ ವರದಿ, ಅದರ ಆಧಾರದ ಮೇಲೆ ನಾನು ಈ ಸಭೆಯಲ್ಲಿ ಮಾತನಾಡಬೇಕಾಗುತ್ತದೆ. ಅದನ್ನು ಬಿಟ್ಟರೆ ನನಗೆ ಬೇರೆ ಮಾಹಿತಿ ಇಲ್ಲ. ತಮಗೆ ಹೇಳುವುದಾದರೆ ಆ ವ್ಯಕ್ತಿಯನ್ನೂ ನಾನು ನೋಡಿಲ್ಲ. ಯಾರೋ ಪಾಟೀಲ್ ಎನ್ನುವಂತಹ ವ್ಯಕ್ತಿಯನ್ನು ನಾನು ನೋಡಿಲ್ಲ. ಇದ್ದರೂ ಸಹ ವಾರದಿಂದ ಈಚೆಗೆ ನಡೆದಿರತಕ್ಕ ಘಟನೆ ಬಗ್ಗೆ ಮಾಹಿತಿ. ವಾರದಲ್ಲಿ ಬಂಧನ ಮಾಡಿರತಕ್ಕದ್ದು, ಕೇಸ್ ಹಾಕಿರತಕ್ಕದ್ದು ಪ್ರತಿಯೊಂದೂ ಮಾಡಿರಬೇಕಲ್ಲ. ಇದರ ಹಿಂದೆ ಇಷ್ಟೊಂದು ನಡೆಯಬೇಕಾದರೆ ಇದರ ಹಿಂದೆ ಬಂಧಿಸಿರಬೇಕಾಗಿತ್ತು, ಅಥವಾ ಬಿಟ್ಟಿರಬೇಕಾಗಿತ್ತು. ಅವರು ಮೇಯರ್ ಆಗಿದ್ದವರು. ಬೆಳಗಾವಿಯ ಮೇಯರ್ ಆಗಿದ್ದಾರೆ. ಆದ್ದರಿಂದ ದಯಮಾಡಿ ಆ ವಿಷಯ ಏನಾದರೂ ಇದ್ದರೆ ಈ ಸಭೆಗೆ ಅದನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ:– ತಾವು ಸ್ವಲ್ಪ ಕಾನೂನನ್ನು ತಿಳಿದುಕೊಂಡಿದ್ದೀರಿ. ತಾವು ಕಾನೂನು ಪಂಡಿತರಿಗಿಂತ ಏನೂ ಕಡಿಮೆ ಇಲ್ಲ. ತಾವು ಹೇಳಿದಂತಹ ವಿಚಾರಗಳು ಏನು ಇದ್ದಾವೆ, ನಾವು ಬಂಧನವನ್ನು ಸ್ಥಿರೀಕರಿಸುವಾಗ ಇದನ್ನೆಲ್ಲಾ ನಾವು ನೋಡಬೇಕು. ಆದ್ದರಿಂದ ತಾವು ಏನು ವಿಚಾರ ಹೇಳಿದ್ದೀರಿ, ಅದರಲ್ಲಿ ಕಾರಣ ಏನು ಇದೆ, ಇದ್ದರೆ ಏನು ಬ್ಯಾಕ್ ಗ್ರೌಂಡ್ ಇದೆ. ಸರ್ಕಾರ ಇಂತಹ ಬಂಧನದ ಕಾರಣಗಳ ಬಗ್ಗೆ ತೃಪ್ತಿಪಟ್ಟರೆ ಮಾತ್ರ ಇಂತಹ ಬಂಧನವನ್ನು ಸ್ಥಿರೀಕರಣ ಮಾಡುವುದಕ್ಕೆ ಸಾಧ್ಯ. ತಾವು ಹೇಳುವಂತಹ ವಿಚಾರಗಳನ್ನು ಗಹನವಾಗಿ, ಗಂಭೀರವಾಗಿ ನೋಡಿ ಅದು ಸ್ಥಿರೀಕರಣಕ್ಕೆ ಯೋಗ್ಯ ಅಲ್ಲದಿದ್ದರೆ ಯೋಗ್ಯ ಅಲ್ಲವೆಂದು ಹೇಳುತ್ತೇವೆ. ಸ್ಥಿರೀಕರಣಕ್ಕೆ ಯೋಗ್ಯ ಇದ್ದರೆ ಎಲ್ಲಾ ಕಾರಣಗಳನ್ನು ಗಂಭೀರವಾಗಿ ಪರಿಶೀಲನೆ ಮಾಡದೆ ನಾವು ಸ್ಥಿರೀಕರಣವನ್ನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಿರ್ವಿಕಾರ ಮನೋಭಾವದಿಂದ ಮಾಡಬೇಕು. ಯಾವುದೇ ಒಂದು ಪೂರ್ವಾಗ್ರಹ ಪೀಡಿತರಾಗಬಾರದು. ಇವರು ಹಿಂದೆ ಏನಾದರೂ ಅನೇಕ ಸಾರಿ ಬಂಧನದಲ್ಲಿ ಇದ್ದರೇ. ಬಿಡುಗಡೆ ಬಂಧನ - ಬಿಡುಗಡೆ ಬಂಧನ, ಬಹಳ ಸಾರಿ ಆಗಿತ್ತೇ ? ಇದರ ಬಗ್ಗೆ ವಿಚಾರ ಮಾಡಿ. ಆತ ಒಳ್ಳೆಯ ವ್ಯಕ್ತಿ. ಮೇಯರ್ ಆಗಿರತಕ್ಕ ಮನುಷ್ಯ. ಅಲ್ಲಿ ಪರಿಸ್ಥಿತಿ ಹೀಗೆ ಇದೆ. ನಾವು ಕರುಣೆಯಿಂದ ಹೇಳುತ್ತಾ ಇಲ್ಲ. ಪ್ರಜಾ ಪ್ರಭುತ್ವ, ಒಂದು ವ್ಯವಸ್ಥೆ ಇದೆ. ಈ ವ್ಯವಸ್ಥೆ ಗಡಿ ಸಮಸ್ಯೆ ಆಗಬಾರದು. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿದ್ದೇನೆ. ಆ ನಿಯೋಗದವರು ತಮ್ಮನ್ನು ಭೇಟಿ ಮಾಡುತ್ತಾರೆಂದು ಕಾಣುತ್ತದೆ. ತಾವು ಏನು ತೀರ್ಮಾನ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು:– ಈಗ ಸಭೆಯನ್ನು ಮುಂದೂಡಲಾಗಿದೆ. ಸಭೆ ಮತ್ತೆ ನಾಳೆ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 6ಗಂಟೆ 19ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 31ನೇ ಡಿಸೆಂಬರ್ 1992ರಂದು ಬೆಳಿಗ್ಗೆ ಸಮಾವೇಶನಗೊಳ್ಳಲು ನಿಶ್ಚಯಿಸಿತು)

---

† (ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)